**ಶಿಫಾರಸು ಮಾಡಿದ ಪ್ರಮಾಣ:**

| | |
|---|---|
| ಹಾಲು ನೀಡುವ ಹಸು | 20–25 ಕೆ.ಜಿ./ದಿನ |
| ಹೆಚ್ಚು ಹಾಲು ಕೊಡುವ ಹಸು | 25–30 ಕೆ.ಜಿ./ದಿನ |
| ಹಾಲು ನೀಡದ ಹಸು | 15–20 ಕೆ.ಜಿ./ದಿನ |
| ಗರ್ಭಿಣಿ ಹಸು | 18–22 ಕೆ.ಜಿ./ದಿನ |
| ಕರುಗಳು (>6 ತಿಂಗಳು) | 5–10 ಕೆ.ಜಿ./ದಿನ |

ಇದರ ಜೊತೆಗೆ ಒಣ ಮೇವು, ಸಾಂದ್ರ ಆಹಾರ, ಖನಿಜ ಮಿಶ್ರಣ ಮತ್ತು ಶುದ್ಧ ಕುಡಿಯುವ ನೀರನ್ನು ಸಮತೋಲಿತ ಪ್ರಮಾಣದಲ್ಲಿ ನೀಡಬೇಕು. ಹೆಡ್ಜ್ ಲ್ಯೂಸೆರ್ನ್, ಮೇವಿನ ಅಲಸಂದೆ ಅಥವಾ ಸ್ಟೈಲೋ ಮುಂತಾದ ದ್ವಿದಳ ಮೇವುಗಳೊಂದಿಗೆ CoFS-31 ಅನ್ನು ನೀಡಿದರೆ ಆಹಾರದ ಪ್ರೋಟೀನ್ ಗುಣಮಟ್ಟ ಮತ್ತಷ್ಟು ಉತ್ತಮವಾಗುತ್ತದೆ.

**ಸೈಲೇಜ್ ಮತ್ತು ಮುನ್ನೆಚ್ಚರಿಕೆಗಳು**

CoFS-31 ಉತ್ತಮ ಗುಣಮಟ್ಟದ ಸೈಲೇಜ್ ತಯಾರಿಸಲು ಸೂಕ್ತವಾಗಿದೆ. 60–70 ದಿನಗಳ ಬೆಳೆಯನ್ನು 2–3 ಸೆಂ.ಮೀ. ಉದ್ದದ ತುಂಡುಗಳಾಗಿ ಕತ್ತರಿಸಿ, ಗಾಳಿಯಿಲ್ಲದಂತೆ ಚೆನ್ನಾಗಿ ಒತ್ತಿ ಸಂಗ್ರಹಿಸಿದರೆ ಸುಮಾರು 45 ದಿನಗಳಲ್ಲಿ ಉತ್ತಮ ಸೈಲೇಜ್ ಸಿದ್ಧವಾಗುತ್ತದೆ. 45 ದಿನಗಳಿಗಿಂತ ಕಡಿಮೆ ವಯಸ್ಸಿನ ಬೆಳೆಯನ್ನು ನೇರವಾಗಿ ಮೇಯಿಸಬಾರದು, ಏಕೆಂದರೆ ಚಿಕ್ಕ ವಯಸ್ಸಿನ ಜೋಳದಲ್ಲಿ ಹೈಡ್ರೋಜನ್ ಸಯನೈಡ್ (HCN) ವಿಷಬಾಧೆಯ ಅಪಾಯ ಇರಬಹುದು. ಮಳೆಯ ನಂತರ ಅಥವಾ ದೀರ್ಘಕಾಲದ ಬರದ ಬಳಿಕ ಕೂಡ ಬೆಳೆಯನ್ನು ಪರಿಶೀಲಿಸಿ ಮಾತ್ರ ಮೇಯಿಸುವುದು ಉತ್ತಮ.

ಬೀಜ ಉತ್ಪಾದನೆಗಾಗಿ ನೂರು ದಿನದ ಅವಧಿಯ ನಂತರ ಬೆಳೆ ಕಟಾವು ಮಾಡ್ಬೇಕು. ತೆನೆಗಳನ್ನು ಕಟಾವು ಮಾಡಿ ಒಣಗಿಸಿ ನಂತರ ಬೀಜಗಳನ್ನು ಸಂಗ್ರಹಿಸಬೇಕು. ಕಟಾವು ಆದ 60 ದಿನಗಳ ನಂತರ ಬೀಜಗಳನ್ನು ಬಿತ್ತನೆಗೆ ಉಪಯೋಗಿಸಿಬೇಕು. ಬಿತ್ತನೆಗೆ ಮೊದಲು ಮೊಳಕೆ ಪರೀಕ್ಷೆ ಅತ್ಯಗತ್ಯ

**ಮುನ್ನೆಚ್ಚರಿಕೆಗಳು**

- ಮಳೆಯ ನಂತರ ಅಥವಾ ತೀವ್ರ ಬರದ ಬಳಿಕ ತುಂಬಾ ಚಿಕ್ಕ ಗಿಡವನ್ನು ತಿನ್ನಿಸಬಾರದು (HCN ವಿಷಬಾಧೆ ಅಪಾಯ).
- ಹೂ ಬಿಡುವ ಮೊದಲು ಕೊಯ್ದರೆ ಪೌಷ್ಟಿಕತೆ ಹೆಚ್ಚು.
- ಮೇವನ್ನು ಚೂರು ಮಾಡಿ ನೀಡುವುದು ಉತ್ತಮ.
- ದ್ವಿದಳ ಮೇವು (ಹೆಡ್ಜ್ ಲ್ಯೂಸೆರ್ನ್, ಸ್ಟೈಲೋ, ಅಲಸಂದೆ ಇತ್ಯಾದಿ) ಜೊತೆಗೆ ನೀಡಿದರೆ ಪ್ರೋಟೀನ್ ಸಮತೋಲನ ಉತ್ತಮವಾಗುತ್ತದೆ.

**CoFS-31 ಯ ಪ್ರಮುಖ ಪ್ರಯೋಜನಗಳು**

- ವರ್ಷಪೂರ್ತಿ ಗುಣಮಟ್ಟದ ಹಸಿರು ಮೇವು ಲಭ್ಯ.
- ಮೇವು ಕೊರತೆಯನ್ನು ಪರಿಣಾಮಕಾರಿಯಾಗಿ ನಿವಾರಿಸುತ್ತದೆ.
- ಹಾಲು ಉತ್ಪಾದನೆ ಮತ್ತು ಜಾನುವಾರುಗಳ ಆರೋಗ್ಯಕ್ಕೆ ಸಹಕಾರಿ.
- ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಮೇವು ಉತ್ಪಾದನೆ.
- ಸೈಲೇಜ್ ತಯಾರಿಸಲು ಅತ್ಯುತ್ತಮ.
- ಬಹುಕೊಯ್ಲು ಸ್ವಭಾವದಿಂದ ಒಂದೇ ಬಿತ್ತನೆಯಿಂದ ಅನೇಕ ಕೊಯ್ಲುಗಳು ಸಾಧ್ಯ.
- ವೈಜ್ಞಾನಿಕ ಹೈನುಗಾರಿಕೆಯಲ್ಲಿ ಆರ್ಥಿಕವಾಗಿ ಲಾಭದಾಯಕ ಮೇವು ಬೆಳೆ.


ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ

ಭಾ.ಕೃ.ಅ.ಪ.-ಕೃಷಿ ವಿಜ್ಞಾನ ಕೇಂದ್ರ,(ದ.ಕ.)ಕಂಕನಾಡಿ, ಮಂಗಳೂರು-575002


# CoFS-31

# ಬಹು ವಾರ್ಷಿಕ ಮೇವಿನ ಜೋಳ

## ಸುಧಾರಿತ ಬೇಸಾಯ ಕ್ರಮಗಳು, ಪೌಷ್ಟಿಕ ಮೌಲ್ಯ ಹಾಗೂ ಹೈನುಗಾರಿಕೆಯಲ್ಲಿ ಬಳಕೆ




• ಹೆಚ್ಚು ಇಳುವರಿ • ಉತ್ತಮ ಪೋಷಕಾಂಶ • ಪಶುಗಳಿಗೆ ಉತ್ತಮ ಮೇವು

**ಬಹುಕಟಾವು – ಹೆಚ್ಚು ಲಾಭ**


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಭಾ.ಕೃ.ಅ.ಪ.-ಕೃಷಿ ವಿಜ್ಞಾನ ಕೇಂದ್ರ
ಮೀನುಗಾರಿಕಾ ಕಾಲೇಜು ಆವರಣ ಎಕ್ಕೂರು
ಕಂಕನಾಡಿ ಅಂಚೆ, ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ-575002
Email:kvkdkmlr@gmail.com, Web address:http://kvkdk.org



ಆಗಸ್ಟ್ – 2026

## CoFS-31 ಬಹು ವಾರ್ಷಿಕ ಮೇವಿನ ಜೋಳ:
### ಸುಧಾರಿತ ಬೇಸಾಯ ಕ್ರಮಗಳು, ಪೌಷ್ಟಿಕ ಮೌಲ್ಯ ಹಾಗೂ ಹೈನುಗಾರಿಕೆಯಲ್ಲಿ ಬಳಕೆ

ಡಾ. ಧರಣೇಶ್ ಎನ್. ಕೆ., ಡಾ. ಟಿ. ಜಿ. ರಮೇಶ್, ಡಾ. ಹರೀಶ ಶೆಣೈ,
ಡಾ. ಮಲ್ಲಿಕಾರ್ಜುನ ಎಲ್, ಡಾ. ಕೇಧಾರನಾಥ, ಡಾ. ರಶ್ಮಿ ಆರ್, ಡಾ. ಕುಮಾರ್ ರಾಠೋಡ್

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ (ದಕ್ಷಿಣ ಕನ್ನಡ), ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (KVAFSU), ಮೀನುಗಾರಿಕಾ ಮಹಾವಿದ್ಯಾಲಯ ಆವರಣ, ಕಂಕನಾಡಿ,
ಮಂಗಳೂರು – 575 002

#### ಪರಿಚಯ

CoFS-31 (Coimbatore Fodder Sorghum-31) ಒಂದು ಅಧಿಕ ಇಳುವರಿ ನೀಡುವ ಬಹುಕೊಯ್ಲು ಮೇವು ಜೋಳದ ತಳಿಯಾಗಿದ್ದು, ವರ್ಷಪೂರ್ತಿ ಗುಣಮಟ್ಟದ ಹಸಿರು ಮೇವನ್ನು ಉತ್ಪಾದಿಸಲು ಅಭಿವೃದ್ಧಿಪಡಿಸಲಾಗಿದೆ. ಒಂದೇ ಬಾರಿ ಬಿತ್ತನೆ ಮಾಡಿದ ನಂತರ ಹಲವು ಬಾರಿ ಕೊಯ್ಲು ಪಡೆಯಬಹುದಾದ ಕಾರಣ, ಹೈನುಗಾರಿಕೆಯಲ್ಲಿ ಹಸಿರು ಮೇವು ಕೊರತೆಯನ್ನು ನಿವಾರಿಸಲು ಇದು ಅತ್ಯುತ್ತಮ ಆಯ್ಕೆಯಾಗಿದೆ. ಉತ್ತಮ ನಿರ್ವಹಣೆಯಲ್ಲಿ ವರ್ಷಕ್ಕೆ 6–8 ಕೊಯ್ಲುಗಳನ್ನು ಪಡೆಯಬಹುದು. ಇದರ ಮರುಬೆಳೆಯುವ ಸಾಮರ್ಥ್ಯ, ಹೆಚ್ಚಿನ ಇಳುವರಿ, ಹೈನುಗಾರಿಕೆಗೆ ಅತ್ಯುತ್ತಮ, ಸೈಲೇಜ್ ತಯಾರಿಸಲು ಸೂಕ್ತ ಮತ್ತು ಉತ್ತಮ ಜೀರ್ಣಶಕ್ತಿಯಿಂದ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ರೈತರು ವ್ಯಾಪಕವಾಗಿ ಬೆಳೆಯುತ್ತಿದ್ದಾರೆ.

#### ಹವಾಮಾನ, ಮಣ್ಣು ಮತ್ತು ಭೂಮಿ ತಯಾರಿ

CoFS-31 ಉಷ್ಣ ಮತ್ತು ಉಪಉಷ್ಣ ಹವಾಮಾನದಲ್ಲಿ ಉತ್ತಮವಾಗಿ ಬೆಳೆಯುತ್ತದೆ. 25–35°C ತಾಪಮಾನ ಮತ್ತು 600–1000 ಮಿ.ಮೀ. ವಾರ್ಷಿಕ ಮಳೆ ಸೂಕ್ತವಾಗಿದೆ. ಕೆಂಪು, ಕಪ್ಪು, ಲೋಮ ಹಾಗೂ ಮರಳು ಮಿಶ್ರಿತ ಮಣ್ಣುಗಳಲ್ಲಿ ಉತ್ತಮ ಬೆಳವಣಿಗೆ ಕಂಡುಬರುತ್ತದೆ. ನೀರು ನಿಲ್ಲದ, ಉತ್ತಮ ನೀರು ಹರಿವಿನ ವ್ಯವಸ್ಥೆಯಿರುವ ಹಾಗೂ pH 6.0–8.0 ಇರುವ ಮಣ್ಣು ಹೆಚ್ಚು ಸೂಕ್ತವಾಗಿದೆ. ಬಿತ್ತನೆಗೆ ಮೊದಲು ಭೂಮಿಯನ್ನು 2–3 ಬಾರಿ ಉಳುಮೆ ಮಾಡಿ, ಕೊನೆಯ ಉಳುಮೆಯಲ್ಲಿ 10–12 ಟನ್ ಕೊಟ್ಟಿಗೆ ಗೊಬ್ಬರವನ್ನು ಪ್ರತಿ ಹೆಕ್ಟೇರ್‌ಗೆ ಸೇರಿಸಬೇಕು. ಕಳೆರಹಿತ ಮತ್ತು ಸಮತಟ್ಟಾದ ಭೂಮಿಯನ್ನು ಸಿದ್ಧಪಡಿಸಿದರೆ ಬೆಳೆಯ ಬೆಳವಣಿಗೆ ಉತ್ತಮವಾಗುತ್ತದೆ.

#### ಬಿತ್ತನೆ ಮತ್ತು ಗೊಬ್ಬರ ನಿರ್ವಹಣೆ

ಮುಂಗಾರು (ಜೂನ್–ಜುಲೈ), ಹಿಂಗಾರು (ಸೆಪ್ಟೆಂಬರ್–ಅಕ್ಟೋಬರ್) ಹಾಗೂ ನೀರಾವರಿ ಪ್ರದೇಶಗಳಲ್ಲಿ ವರ್ಷಪೂರ್ತಿ CoFS-31 ಬೆಳೆಯಬಹುದು. ಒಂದು ಹೆಕ್ಟೇರ್‌ಗೆ 10–12 ಕೆ.ಜಿ. ಪ್ರಮಾಣಿತ ಬೀಜ ಸಾಕಾಗುತ್ತದೆ. ಬೀಜವನ್ನು ಕಾರ್ಬೆಂಡೈಜಿಮ್ ಅಥವಾ ಥೈರಮ್‌ನಿಂದ ಬೀಜೋಪಚಾರ ಮಾಡಿ, ನಂತರ ಅಜೋಸ್ಪಿರಿಲ್ಲಂ ಹಾಗೂ ಫಾಸ್ಫೋಬ್ಯಾಕ್ಟೀರಿಯಾ ಬಳಸಿ ಬಿತ್ತಿದರೆ ಮೊಳಕೆ ಮತ್ತು ಬೇರುಗಳ ಬೆಳವಣಿಗೆ ಉತ್ತಮವಾಗುತ್ತದೆ (ಅಜೋಸ್ಪಿರಿಲ್ಲಂ – 25 ಗ್ರಾಂ/ಕೆ.ಜಿ. ಬೀಜ, ಫಾಸ್ಫೋಬ್ಯಾಕ್ಟೀರಿಯಾ – 25 ಗ್ರಾಂ/ಕೆ.ಜಿ. ಬೀಜ ಅಥವಾ ಥೈರಮ್/ಕಾರ್ಬೆಂಡಜಿಮ್ 2 ಗ್ರಾಂ/ಕೆ.ಜಿ. ಬೀಜ).

#### ಶಿಫಾರಸು ಮಾಡಿದ ಅಂತರ:

ಸಾಲಿನಿಂದ ಸಾಲಿಗೆ – 30 ಸೆಂ.ಮೀ.
ಗಿಡದಿಂದ ಗಿಡಕ್ಕೆ – 15 ಸೆಂ.ಮೀ.

ಗೊಬ್ಬರವನ್ನು ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ನೀಡುವುದು ಉತ್ತಮ. ಸಾಮಾನ್ಯವಾಗಿ ಪ್ರತಿ ಹೆಕ್ಟೇರ್‌ಗೆ 75 ಕೆ.ಜಿ. ಸಾರಜನಕ, 50 ಕೆ.ಜಿ. ಫಾಸ್ಫರಸ್ ಹಾಗೂ 40 ಕೆ.ಜಿ. ಪೊಟ್ಯಾಶ್ ಮೂಲ ಗೊಬ್ಬರವಾಗಿ ನೀಡಬೇಕು. ಪ್ರತಿ ಕೊಯ್ಲಿನ ನಂತರ 40–50 ಕೆ.ಜಿ. ಸಾರಜನಕ ನೀಡುವುದರಿಂದ ಮರುಬೆಳವಣಿಗೆ ವೇಗವಾಗಿ ನಡೆಯುತದೆ.

#### ನೀರಾವರಿ, ಕಳೆ ನಿಯಂತ್ರಣ ಮತ್ತು ಕೊಯ್ಲು

ಬಿತ್ತನೆಯ ನಂತರ ತಕ್ಷಣ ನೀರು ನೀಡಬೇಕು. ನಂತರ ಹವಾಮಾನವನ್ನು ಅವಲಂಬಿಸಿ 7–10 ದಿನಗಳಿಗೊಮ್ಮೆ ನೀರನ್ನು ಕೊಡಬೇಕು. ಬೇಸಿಗೆಯಲ್ಲಿ ನೀರಿನ ಅವಶ್ಯಕತೆ ಹೆಚ್ಚಾಗುವುದರಿಂದ 5–7 ದಿನಗಳಿಗೊಮ್ಮೆ ನೀರು ನೀಡುವುದು ಸೂಕ್ತ. ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ಬಿತ್ತನೆಯ ನಂತರ 20–25 ದಿನಗಳಲ್ಲಿ ಮೊದಲ ಕಳೆ ತೆಗೆಯಬೇಕು. ಅಗತ್ಯವಿದ್ದರೆ 40–45 ದಿನಗಳಲ್ಲಿ ಮತ್ತೊಮ್ಮೆ ಕಳೆ ತೆಗೆಯಬಹುದು. ಉತ್ತಮ ಕಳೆ ನಿಯಂತ್ರಣದಿಂದ ಗೊಬ್ಬರ ಮತ್ತು ನೀರಿನ ಸದ್ಬಳಕೆ ಆಗಿ ಹೆಚ್ಚಿನ ಇಳುವರಿ ದೊರೆಯುತ್ತದೆ. ಮೊದಲ ಕೊಯ್ಲನ್ನು 60–70 ದಿನಗಳಲ್ಲಿ ಮಾಡಬೇಕು. ನಂತರ ಪ್ರತಿ 45 ದಿನಗಳಿಗೊಮ್ಮೆ ಕೊಯ್ಲು ಮಾಡಬಹುದು. ಕೊಯ್ಲಿನ ವೇಳೆ ನೆಲದಿಂದ ಸುಮಾರು 8–10 ಸೆಂ.ಮೀ. ಎತ್ತರದಲ್ಲಿ ಕತ್ತರಿಸಿದರೆ ಗಿಡಗಳು ಬೇಗನೆ ಮರುಬೆಳೆಯುತ್ತವೆ. ಪ್ರತಿ ಕಟಾವಿನ ನಂತರ ಸಾಲಿನಲ್ಲಿ ಕಳೆ ತೆಗೆದು ಗೊಬ್ಬರ ಕೊಟ್ಟು, ನೀರು ಬಿಡಬೇಕು.

#### ಇಳುವರಿ ಮತ್ತು ಪೌಷ್ಟಿಕ ಮೌಲ್ಯ

ಉತ್ತಮ ನಿರ್ವಹಣೆಯಲ್ಲಿ CoFS-31 ಪ್ರತಿ ಹೆಕ್ಟೇರ್‌ಗೆ ವರ್ಷಕ್ಕೆ ಸುಮಾರು 140–180 ಟನ್ ಹಸಿರು ಮೇವು ನೀಡುವ ಸಾಮರ್ಥ್ಯ ಹೊಂದಿದೆ. ಇದರ ಪೌಷ್ಟಿಕ ಮೌಲ್ಯವು ಹೈನುಗಾರಿಕೆಗೆ ಅನುಕೂಲಕರವಾಗಿದ್ದು, ಸರಾಸರಿ 8–10% ಕಚ್ಚಾ ಪ್ರೋಟೀನ್, 20–25% ಒಣ ಪದಾರ್ಥ ಹಾಗೂ ಉತ್ತಮ ಪ್ರಮಾಣದ ಜೀರ್ಣವಾಗುವ ನಾರು ಹೊಂದಿರುತ್ತದೆ.

| ವಿವರ | ಪ್ರಮಾಣ |
|---|---|
| ಮೊದಲ ಕೊಯ್ಲು | 30–40 ಟನ್/ಹೆಕ್ಟೇರ್ |
| ನಂತರದ ಪ್ರತಿಯೊಂದು ಕೊಯ್ಲು | 18–25 ಟನ್/ಹೆಕ್ಟೇರ್ |
| ವಾರ್ಷಿಕ ಒಟ್ಟು | 140–180 ಟನ್ ಹಸಿರು ಮೇವು/ಹೆಕ್ಟೇರ್ |

| ಪೌಷ್ಟಿಕ ಅಂಶ | ಸರಾಸರಿ ಪ್ರಮಾಣ |
|---|---|
| ಒಣ ಪದಾರ್ಥ (DM) | 20–25% |
| ಕಚ್ಚಾ ಪ್ರೋಟೀನ್ (CP) | 8–10% |
| ಕಚ್ಚಾ ನಾರು (Crude Fibre) | 28–32% |
| TDN | 55–60% |
| ಕ್ಯಾಲ್ಸಿಯಂ | 0.30–0.45% |
| ಫಾಸ್ಪರಸ್ | 0.20–0.30% |

#### ಹಾಲು ಕೊಡುವ ಹಸುಗಳಿಗೆ ಬಳಕೆ

CoFS-31 ಅನ್ನು ಒಂದೇ ಮೇವಾಗಿ ನಿರಂತರವಾಗಿ ನೀಡುವುದಕ್ಕಿಂತ, ದ್ವಿದಳ ಮೇವು (ಹೆಡ್ಜ್ ಲ್ಯೂಸರ್ನ್, ಅಲಸಂದೆ, ಸೈಲೋ ಇತ್ಯಾದಿ), ಒಣ ಮೇವು ಹಾಗೂ ಸಾಂದ್ರ ಆಹಾರದೊಂದಿಗೆ ಸಮತೋಲಿತ ಆಹಾರವಾಗಿ ನೀಡುವುದು ಉತ್ತಮ. ಇದರಿಂದ ಹಸುಗಳ ಆರೋಗ್ಯ, ಹಾಲಿನ ಉತ್ಪಾದನೆ ಮತ್ತು ಪೌಷ್ಟಿಕ ಸಮತೋಲನ ಉತ್ತಮವಾಗಿರುತ್ತದೆ. CoFS-31 ಅನ್ನು ಚೂರು ಮಾಡಿ ಇತರ ಮೇವುಗಳೊಂದಿಗೆ ಸಮತೋಲಿತ ಆಹಾರವಾಗಿ ನೀಡುವುದು ಉತ್ತಮ. ಹೆಚ್ಚಿನ ಹಾಲು ಉತ್ಪಾದನೆ, ಉತ್ತಮ ಜೀರ್ಣಕ್ರಿಯೆ ಮತ್ತು ಮೇವು ಸೇವನೆಯನ್ನು ಹೆಚ್ಚಿಸಲು ಇದು ಸಹಕಾರಿ. ಆದರೆ ಇದನ್ನೇ ಏಕೈಕ ಆಹಾರವಾಗಿ ನೀಡಬಾರದು.

| | |
|---|---|
| CoFS-31 ಹಸಿರು ಮೇವು: | 20–25 ಕೆ.ಜಿ. |
| ಒಣ ಮೇವು: | 3–5 ಕೆ.ಜಿ. |
| ಸಾಂದ್ರ ಆಹಾರ: | ಹಾಲಿನ ಉತ್ಪಾದನೆಗೆ ಅನುಗುಣವಾಗಿ (ಸುಮಾರು 1 ಕೆ.ಜಿ. ಸಾಂದ್ರ ಆಹಾರಕ್ಕೆ 2.5–3 ಲೀಟರ್ ಹಾಲು) |
| ಖನಿಜ ಮಿಶ್ರಣ: | 50 ಗ್ರಾಂ |
| ಉಪ್ಪು: | 30 ಗ್ರಾಂ |
| ಶುದ್ಧ ನೀರು: | ಬೇಕಾದಷ್ಟು |